# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ | KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ   E-mail : kannadapostnews@gmail.com   / ಕನ್ನಡ post   Price: ₹1

Vol.No. 1 | Issue : 270 | Pages .02 | Date : 14.09.2025 SUNDAY   RNI NO.KARKAN/2024/89601   Kannada Daily

ಸಂಪುಟ : 01 – ಸಂಚಿಕೆ : 270 – ಪುಟಗಳು : 02   14.09.2025 ಭಾನುವಾರ   Ph : 8762954248   ದರ : ₹1


# ಮೊಸಳೆಹೊಸಳ್ಳಿಯಲ್ಲಿ ಸೂತಕದ ಛಾಯೆ

## ಗ್ರಾಮದಲ್ಲಿ ನೀರವ ಮೌನ । ಸಾವಿನ ಸಂಖ್ಯೆ 10ಕ್ಕೆ ಏರಿಕೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಡಿಜೆ ಹಾಡಿಗೆ ನೃತ್ಯ, ವಿಘ್ನ ವಿನಾಯಕ ಗಣೇಶನಿಗೆ ವಿದಾಯ ಹೇಳುತ್ತಾ ಸ್ನೇಹಿತರೊಂದಿಗೆ ಖುಷಿಯ ಕ್ಷಣವನ್ನು ಕಳೆಯಬೇಕೆಂಬ ಪೂರ್ವ ನಿಯೋಜಿತ ಯೋಜನೆಯನ್ನು ವಿಧಿ ಬದಲಿಸಿದ್ದರಿಂದ ತಾಲ್ಲೂಕಿನ ಮೊಸಳೆಹೊಸಳ್ಳಿಯಲ್ಲಿ ನೀರವ ಮೌನ ಆವರಿಸಿದೆ.

ಶುಕ್ರವಾರ ರಾತ್ರಿ ಗಣೇಶೋತ್ಸವ ಮೆರವಣಿಗೆ ಘಟನೆಯಿಂದ ಮೊಸಳೆ ಹೊಸಳ್ಳಿ ಮಾತ್ರವಲ್ಲದೆ ಜಿಲ್ಲಾದ್ಯಂತ ಶೋಕ ಭಾವ ಮೂಡಿದೆ. ನಗರದ ಹಿಮ್ಸ್ ಆವರಣದಲ್ಲಿ ಶುಕ್ರವಾರ ರಾತ್ರಿ 9 ಗಂಟೆಯಿಂದ ಕೇವಲ ದು:ಖ, ದುಗುಡ, ಗಾಢ ಮೌನ, ಕುಟುಂಬಸ್ಥರ ರೋದನೆ, ಅಧಿಕಾರಿಗಳ ಮೌನವೇ ರಾರಾಜಿಸುತ್ತಿದೆ.

**ಓದೋದಕ್ಕೆ ನಿಮ್ಮೂರಿಗೆ ಕಳುಹಿಸಿದ್ದೆ:**

ಬಳ್ಳಾರಿ ಜಿಲ್ಲೆಯ ನಾಗಲಕೆರೆಯ ಸುಶೀಲಾ ಗಂಡನನ್ನು ಕಳೆದುಕೊಂಡು ಮನೆಗೆಲಸ ಮಾಡಿ ಪುತ್ರ ಪ್ರವೀಣ್‌ನನ್ನು ಇಂಜಿನಿಯರ್ ಮಾಡಿಸಬೇಕೆಂಬ ಕನಸು ಹೊತ್ತಿದ್ದರು. ರಾತ್ರಿ 3 ಗಂಟೆಗೆ ಬಂದ ಅವರು, ಎಂಜಿನಿಯ-ರಿಂಗ್ ಮಾಡಿಕೊಂಡು ಬಾ ಎಂದು ನಿಮ್ಮೂರಿಗೆ ಕಳುಹಿಸಿದ್ದೆ, ನೀವು ನನ್ನ ಮಗನನ್ನು ಸಾಯಿಸಿ ಕಳುಹಿಸುತ್ತಿದ್ದೀರ ಎಂದು ಗೋಳಾಡಿದರು.

**ಚಕ್ರದ ಮಧ್ಯೆ ಮಲಗಿ ಪ್ರಾಣ ಉಳಿಸಿಕೊಂಡೆ:**

ಡಿಜೆ ಶಬ್ದಕ್ಕೆ ಹೆಜ್ಜೆ ಹಾಕುತ್ತಿದ್ದಾಗ ದಿಢೀರ್ ಸಂಭವಿಸಿದ ಅಪಘಾತದಲ್ಲಿ ಜೊತೆಗಿದ್ದವರೆಲ್ಲ ಲಾರಿಯ ಚಕ್ರದಡಿ ಸಿಲುಕಿ ಕಣ್ಣೆದುರೇ ಪ್ರಾಣ ಬಿಟ್ಟರು. ಕೂದಲೆಳೆ ಅಂತರಲ್ಲಿ ಎರಡು ಬದಿಯ ಚಕ್ರಗಳ ಮಧ್ಯೆ ಸಿಲುಕಿದ್ದ-ರಿಂದ ಪ್ರಾಣ ಉಳಿಯಿತೆಂದು ಅರಸೀಕೆರೆಯ ಎಂಜಿನಿಯರಿಂಗ್ ವಿದ್ಯಾರ್ಥಿ ವಿಷ್ಣು ಕಣ್ಣೀರಾದರು. ಕಣ್ಣೆದುರೇ ಜೊತೆಗಿದ್ದವರು ಸತ್ತು ಬಿದ್ದರು. ಹತ್ತಾರು ಜನರು ಗಾಯಗೊಂಡರು. ಇಂತಹ ಸ್ಥಿತಿ ಯಾರಿಗೂ ಬಾರದಿರಲಿ ಎಂದು ಬಿಕ್ಕಿ ಬಿಕ್ಕಿ ಅತ್ತರು.

**ಶವಾಗಾರದಲ್ಲಿ ಮಗನಿಗಾಗಿ ಕಾಯಬೇಕೆ:**

ಕಾಲೇಜಿನಿಂದ ಬರುತ್ತಿದ್ದ ಮಗನ ಬರುವಿಕೆಗಾಗಿ ನಿತ್ಯ ಮನೆ ಬಾಗಿಲಲ್ಲಿ ಕಾಯುತ್ತಿದ್ದೆ. ಈಗ ಶವಾಗಾರದ ಮುಂದೆ ಕಾಯುವಂತಾಗಿದೆ ಎಂದು ಡನಾಯಕನಹಳ್ಳಿ ಪಿಯು ವಿದ್ಯಾರ್ಥಿ ಈಶ್ವರ್ ಅವರ ತಂದೆ ರವಿಕುಮಾರ್ ಗೋಳಾಡಿದರು. ಈಗ ಕಾಯುವ ಬದಲು ಮೊದಲೇ ಕಾದಿದ್ದರೆ ನನ್ನ ಮಗ ಉಳಿಯುತ್ತಿದ್ದ. ಎಲ್ಲಾ ಮುಗಿದ ಮೇಲೆ ನೂರಾರು ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜನೆ ಮಾಡಿದ್ದೀರಿ. ಯಾವ ಕೊರತೆಯಾಗದಂತೆ ಪುತ್ರನನ್ನು ಬೆಳೆಸಿದ್ದೆ. ನನ್ನ ಮಗನನ್ನು ತಂದುಕೊಡುತ್ತೀರಾ ಎಂದು ಅಂಗಲಾಚಿದ್ದು ಮನ ಕಲಕುವಂತಿತ್ತು. ಮೊಸಳೆಹೊಸಳ್ಳಿ ಬಳಿ ಸಂಭವಿಸಿದ ಭೀಕರ ದುರಂತದಲ್ಲಿ ಗೊರೂರು ಠಾಣೆ ಪಿಎಸ್ಐ ಧನರಾಜ್ ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕ್ಯಾಂಟ-ರ್ ಬೈಕ್‌ಗೆ ಡಿಕ್ಕಿಯಾಗುವ ಕೆಲವು ಸೆಕೆಂಡುಗಳ ಮೊದಲು ಧನರಾಜ್ ಅಲ್ಲಿ ಹೋಗಿದ್ದರು. ಜೋರು ಶಬ್ದಕ್ಕೆ ಹಿಂದುರಿಗಿ ನೋಡಿದಾಗ ಎಲ್ಲವೂ ಮುಗಿದು ಹೋಗಿತ್ತು.

**ಪ್ರಾಧಿಕಾರವೂ ಪರಿಹಾರ ಕೊಡಲಿ:**

ಘಟನಾ ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಮೃತ ವಿದ್ಯಾರ್ಥಿಗಳ ಮನೆಗೂ ತೆರಳಿ ಸಾಂತ್ವನ ಹೇಳಿದರು. ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿ, ಕ್ಷಣ ಮಾತ್ರದಲ್ಲಿ ಹೀಗಾಗುತ್ತದೆಂದು ಯಾರೂ ಊಹಿಸಿರಲಿಲ್ಲ. ಮೃತರ ಕುಟುಂಬ ಹಾಗು ಗಾಯಾಳುಗಳ ಜೊತೆ ಸರ್ಕಾರ ಇರುತ್ತದೆಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಹೇಳಿದರು.

ಡಿಜೆಗೆ ಅವಕಾಶ ನೀಡಿದ್ದು ಅವಘಡಕ್ಕೆ ಕಾರಣವಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಧಾರ್ಮಿಕ ಕೆಲಸಗಳಿಗೆ ಎಲ್ಲರ ಸಹಕಾರ ಬೇಕಾಗುತ್ತದೆ. ಆದರೆ ಅಲ್ಲಿ ಬೇರೆಯದ್ದೇ ನಡೆಯುತ್ತದೆ. ಏಕಾಏಕಿ ಕಟ್ಟುನಿಟ್ಟು ಮಾಡಲು ಹೋದರೆ ಧಾರ್ಮಿಕ ಭಾವನೆಗಳನ್ನು ಅರ್ಥ ಮಾಡಿಕೊಳ್ಳುತ್ತಿಲ್ಲವೆಂದು ತಿರುವು ಕೊಡಲಾಗುತ್ತದೆ ಎಂದರು.

ಈ ದುರದೃಷ್ಟಕರ ಘಟನೆ ನಡೆಯಬಾರದಿತ್ತು. ಕ್ಯಾಂಟ-ರ್ ಚಾಲಕ ಭುವನೇಶ್‌ನ ನಿರ್ಲಕ್ಷ್ಯವೇ ದುರಂತಕ್ಕೆ ಕಾರಣವೆಂದು ತಿಳಿದುಬಂದಿದೆ. ಆತನ ವಿರುದ್ಧ ಗೊರೂರು ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ. ಆತ ಪೊಲೀಸರ ವಶದಲ್ಲಿದ್ದು, ತನಿಖೆ ನಡೆಯುತ್ತಿದೆ ಎಂದರು.







ದುರಂತದ ನಂತರ ಸ್ಥಳೀಯರಿಂದ ಥಳಿತಕ್ಕೊಳಗಾಗಿ ಗಾಯಗೊಂಡಿರುವ ಚಾಲಕ ಚಿಕಿತ್ಸೆ ಪಡೆಯುತ್ತಿದ್ದು, ಆತನ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದರು.

**ಕೋಮ ಬಣ್ಣ ಬೇಡ:**

ಘಟನೆಗೆ ವಿಪಕ್ಷದವರು ಕೋಮು ಬಣ್ಣ ಬಳಿಯಲು ಯತ್ನಿಸುತ್ತಿರುವುದೂ ಕಂಡುಬಂದಿದೆ. ಸಮಾಜದಲ್ಲಿ ಅಶಾಂತಿಗೆ ಕಾರಣವಾಗುವ ಇಂತಹ ದುರ್ವರ್ತನೆ ಸಹ ಅಪರಾಧವಾಗಿದ್ದು, ಅಂತಹವರ ವಿರುದ್ಧವೂ ಸಹ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಚ್ಚ-ರಿಸಿದರು.



ಹಾಸನ-ಮೈಸೂರು ರಾಷ್ಟ್ರೀಯ ಹೆದ್ದಾರಿ 373ರಲ್ಲಿ ದುರಂತ ಸಂಭವಿಸಿದ್ದು, ರಸ್ತೆ ವೈಜ್ಞಾನಿಕವಾಗಿ ನಿರ್ಮಾಣವಾಗಿಲ್ಲ, ಅಗಲೀಕರಣ ಆಗಬೇಕು ಎಂಬ ಕೂಗು ಹಿಂದಿನಿಂದಲೂ ಕೇಳಿ ಬರುತ್ತಿದೆ. ಈ ಬಗ್ಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸರ್ಕಾರದ ಪರವಾಗಿ ನಾನು ಹಾಗೂ ಸಂಸದ ಶ್ರೇಯಸ್ ಪತ್ರ ಬರೆಯುತ್ತೇವೆ. ದುರಂತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಹೆದ್ದಾರಿ ಪ್ರಾಧಿಕಾರವೂ ಪರಿಹಾರ ನೀಡಬೇಕಿದೆ ಎಂದರು.

**ಗ್ರಾಮದಲ್ಲಿ ಬಿಗಿ ಭದ್ರತೆ:**

ದುರಂತ ಕುರಿತು ಪ್ರತಿಕ್ರಿಯೆ ನೀಡಿದ ದಕ್ಷಿಣ ವಲಯ ಐಜಿಪಿ ಡಾ.ಬೋರಲಿಂಗಯ್ಯ ಅವರು, ಕ್ಯಾಂಟರ್ ಚಾಲಕನ ನಿರ್ಲಕ್ಷ್ಯವೇ ದುರಂತಕ್ಕೆ ಕಾರಣ ಎಂದರು. ಇನ್ನು ಘಟನಾ ಸ್ಥಳದಲ್ಲಿ ಸೊಕೋ ತಂಡ ಕೂಡ ಭೇಟಿ ನೀಡಿ ಪರಿಶೀಲನೆ ನಡೆಸಿತು. ಅಪಘಾತದ ಕಾರಣ ತಿಳಿಯಲು ತನಿಖೆ ಆರಂಭಿಸಿದೆ. ತಜ್ಞರ ತಂಡ ಘಟನಾ ಸ್ಥಳವನ್ನು ಇಂಚಿಂಚೂ ಪರಿಶೀಲನೆ ಮಾಡಿತು. ಮುನ್ನೆಚ್ಚರಿಕೆ ಕ್ರಮವಾಗಿ ಮೊಸಳೆ ಹೊಸಳ್ಳಿ ಗ್ರಾಮದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ವಹಿಸಲಾಗಿದೆ.

ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ, ಶಾಸಕರಾದ ಹೆಚ್.ಪಿ. ಸ್ವರೂಪ್, ಸಿಮೆಂಟ್ ಮಂಜು, ಹೆಚ್.ಕೆ. ಸುರೇಶ್ ಮತ್ತಿತರರು ಆಸ್ಪತ್ರೆಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಮಧ್ಯರಾತ್ರಿ 3 ಗಂಟೆ ವರೆಗೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರೊಂದಿಗೆ ದೂರವಾಣಿ ಸಂಪರ್ಕದಲ್ಲಿದ್ದ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಪ್ರತಿಕ್ಷಣದ ಮಾಹಿತಿ ಪಡೆದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತರುತ್ತಿದ್ದರು. ಬೆಳಿಗ್ಗೆ 9 ಗಂಟೆಗೆ ಶಾಂತಿಗ್ರಾಮಕ್ಕೆ ಬಂದ ಅವರು ಅಲ್ಲಿನ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ. ಎಸ್. ಲತಾಕುಮಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮದ್ ಸುಜೀತಾ, ಉಪವಿಭಾಗಾಧಿಕಾರಿ ಮಾರುತಿ ಇದ್ದರು. ಅಲ್ಲಿಂದ ಮೊಸಳೆಹೊಸಳ್ಳಿ ಘಟನಾ ಸ್ಥಳಕ್ಕೆ ಬಂದರು. ಕ್ಯಾಂಟರ್ ಡಿಕ್ಕಿ ಮಾಡಿದ ಸ್ಥಳ ಪರಿಶೀಲಿಸಿದರು.



## ಮನೆಗೆಲಸ ಮಾಡಿ ಬೆಳೆಸಿದ್ದ ತಾಯಿ

ಬಳ್ಳಾರಿಯ ವಿದ್ಯಾರ್ಥಿ ಪ್ರವೀಣ್ ಅವರ ತಂದೆ ಹಿರೀಸ್ವಾಮಿ ನಿಧನರಾಗಿದ್ದು ತಾಯಿ ಸುಶೀಲಾ ಮನೆಗೆಲಸ ಮಾಡಿಕೊಂಡು ಮಗನ ಭವಿಷ್ಯಕ್ಕಾಗಿ ಸರ್ವಸ್ವವನ್ನು ತ್ಯಾಗ ಮಾಡಿದ್ದರು. ಎಸ್-ಎಸ್ಎಲ್‌ಸಿ, ಪಿಯುಸಿಯಲ್ಲಿ ಉತ್ತಮ ಅಂಕ ಗಳಿಸಿದ ಮಗ ಎಂಜಿನಿಯರ್ ಆಗಿ ಕೊನೆಗಾಲದಲ್ಲಿ ಚೆನ್ನಾಗಿ ನೋಡಿಕೊಳ್ಳುತ್ತಾನೆಂದು ಕನಸು ಕಂಡಿದ್ದರು. ಮಗ ಇನ್ನೇನು ವ್ಯಾಸಂಗ ಮುಗಿಸಿ ಕ್ಯಾಂಪಸ್ ಸಂದರ್ಶನದಲ್ಲೂ ಪಾಸಾಗಿ ಮನೆಗೆ ಆಧಾರವಾಗುತ್ತಾನೆಂಬ ಅವರ ಭರವಸೆಯನ್ನು ಮೊಸಳೆಹೊಸಳ್ಳಿ ಗಣೇಶೋತ್ಸವ ಚಿವುಟಿ ಹಾಕಿದೆ. ಇನ್ನು ಹೊಸದುರ್ಗ ತಾಲ್ಲೂಕು ಗವಿರಂಗಾಪುರದ ಮಿಥುನ್ ತೀರಾ ಬಡಕುಟುಂಬದಿಂದ ಬಂದಿದ್ದು ಅವರ ತಂದೆ ವಿಜಯನಾಗರಾಜು ದೇವಸ್ಥಾನವೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಮಿಥುನ್‌ಗೆ ಇಬ್ಬರು ಸಹೋದರಿಯರಿದ್ದು ಇನ್ನೇನು ನಾನು ನೌಕರಿ ಪಡೆಯುತ್ತೇನೆ. ನಿಮನ್ನೆಲ್ಲ ಚೆನ್ನಾಗಿ ನೋಡಿಕೊಳ್ಳುತ್ತೇನೆಂದು ಭರವಸೆ ನೀಡಿದ್ದ. ಸ್ನೇಹಿತರೊಂದಿಗೆ ಹುಟ್ಟು ಹಬ್ಬ ಆಚರಿಸಿಕೊಂಡಿದ್ದ ಮಿಥುನ್ ಕೇಕ್ ಕತ್ತರಿಸಿ ಊಟ ಮಾಡಿಕೊಂಡು ಮೆರವಣಿಗೆ ವೀಕ್ಷಣೆಗೆ ತೆರಳಿದವನು ವಾಪಾಸ್ ಬರಲೇ ಇಲ್ಲ. ಜೊತೆಗೆ ಸುರೇಶ್‌ನ ಜೀವನಗಾಥೆಯು ಇದಕ್ಕಿಂತ ಭಿನ್ನವಾಗಿರಲಿಲ್ಲ.



ಹೊರಟಿದ್ದ ವೇಳೆ ಯಮರಾಯನಂತೆ ಬಂದ ಕ್ಯಾಂಟರ್ ಒಂದು ಡಿವೈಡರ್‌ಗೆ ಡಿಕ್ಕಿಯಾಗಿ 10 ಜನರ ಬಲಿ ಪಡೆದಿದೆ. ಶುಕ್ರವಾರ ರಾತ್ರಿ ಒಂಬತ್ತು ಜನ ಮೃತಪಟ್ಟರೆ ಶನಿವಾರ ಶಾಂತಿಗ್ರಾಮ ಹೋಬಳಿ ಶಿವಯ್ಯನಕೊಪ್ಪಲು ಗ್ರಾಮದ ಚಂದನ್ (26) ಮೃತಪಟ್ಟಿದ್ದು ಆ ಮೂಲಕ ಮೃತರ ಸಂಖ್ಯೆ 10ಕ್ಕೆ ಏರಿಕೆಯಾಗಿದೆ.

## ಎಂಜಿನಿಯರಿಂಗ್ ಕಾಲೇಜಿನಲ್ಲಿ ಗಾಢ ಮೌನ

ಮೊಸಳೆಹೊಸಳ್ಳಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಗಾಢ ಮೌನ ಆವರಿಸಿದೆ. ಶುಕ್ರವಾರ ರಾತ್ರಿ ಸಂಭವಿಸಿದ ಘೋರ ದುರಂತದಲ್ಲಿ ಮೃತಪಟ್ಟ ಎಂಜಿನಿಯರಿಂಗ್ ವಿದ್ಯಾರ್ಥಿಗಳಾದ ಪ್ರವೀಣ್, ಮಿಥುನ್ ಹಾಗೂ ಸುರೇಶ್ ಅವರ ನೆನೆದು ಸ್ನೇಹಿತರು ಕಣ್ಣೀರು ಹಾಕಿದರು.

ಸ್ನೇಹಿತರೊಂದಿಗೆ ಗಣೇಶೋತ್ಸವ ವೀಕ್ಷಣೆಗೆಂದು ತೆರಳಿದವರು ಜವರಾಯನ ಅಟ್ಟಹಾಸಕ್ಕೆ ಬಲಿಯಾಗಿದ್ದಾರೆ. ಮೃತ ಮೂವರು ಎಂಜಿನಿಯರಿಂಗ್ ವಿದ್ಯಾರ್ಥಿಗಳ ನೋವಿನ ಕಥೆ ಕೇಳಿದರೆ ಯಾ-ರಿಗಾದರೂ ದು:ಖವಾಗುತ್ತದೆ.

ಬಳ್ಳಾರಿ ಜಿಲ್ಲೆ ನಾಗಲಕೆರೆ ಗ್ರಾಮದ ಪ್ರವೀಣ್, ಚಿಕ್ಕಮಗಳೂರು ತಾಲ್ಲೂಕು ಮಣೇನಹಳ್ಳಿಯ ಸುರೇಶ್ ಹಾಗೂ ಹೊಸದುರ್ಗ ತಾಲ್ಲೂಕು ಗವಿರಂಗಾಪುರದ ಮಿಥುನ್ ಮೃತಪಟ್ಟಿದ್ದಾರೆ. ಪ್ರವೀಣ್ ಹಾಗು ಮಿಥುನ್ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಓದುತ್ತಿದ್ದರೆ ಸುರೇಶ್ ಎಲೆಕ್ಟ್ರಿಕಲ್ ವ್ಯಾಸಂಗ ಮಾಡುತ್ತಿದ್ದ. ಸೆಮಿಸ್ಟರ್ ಪರೀಕ್ಷೆ ಬರೆದು ಇನ್ನೆರಡು ತಿಂಗಳಲ್ಲಿ ವ್ಯಾಸಂಗ ಮುಗಿಸಿ ಊರಿಗೆ ಹೋಗುವವರಿದ್ದರು. ಶುಕ್ರವಾರ ಸಂಜೆ 4.30ರ ತನಕ ಕಾಲೇಜಿನ ಪ್ರಯೋಗಾಲಯದಲ್ಲಿ ನಮೊಂದಿಗೆ ಇದ್ದರು. ಆ ಬಳಿಕ ಹಾಸ್ಟೆಲ್‌ಗೆ ತೆರಳಿದ್ದರು. ಮೂವರು ಸಾದು ಸ್ವಭಾವದ ವ್ಯಕ್ತಿತ್ವದವರು. ಎಂಜಿನಿಯರ್‌ಗಳಾಗಿ ಉತ್ತಮ ಭವಿಷ್ಯ ಕಟ್ಟಿಕೊಳ್ಳಬೇಕೆಂದು ಕನಸು ಕಂಡಿದ್ದವರು ಅಗಲಿದ್ದಾರೆಂಬುದನ್ನು ನಂಬಲು ಸಾಧ್ಯವಾಗುತ್ತಿಲ್ಲವೆಂದು ಕಂಪ್ಯೂಟರ್ ಸೈನ್ಸ್ ವಿಭಾಗ ಮುಖ್ಯಸ್ಥ ಎಂ.ಇ. ರಘು ಭಾವುಕರಾದರು.

## ಕಾಲೇಜಿಗೆ ರಜೆ-ಮೌನ

ಕಾಲೇಜು ವಿದ್ಯಾರ್ಥಿಗಳ ದುರಂತ ಸಾವು ಹಿನ್ನೆಲೆಯಲ್ಲಿ ಶನಿವಾರ ಎಂಜಿನಿಯ-ರಿಂಗ್ ಕಾಲೇಜಿಗೆ ರಜೆ ಘೋಷಿಸಲಾಗಿತ್ತು. ಬೋಧಕ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಸ್ನೇಹಿತರ ಅಗಲಿಕೆಗೆ ಶ್ರದ್ಧಾಂಜಲಿ ಸಲ್ಲಿಸಿದರು.

## ದುರಂತ ಸ್ಥಳಕ್ಕೆ ಸಚಿವ ಭೇಟಿ, ರೋಗಿಗಳಿಗೆ ಗೌಡರ ಸಾಂತ್ವನ

ಹಾಸನ ತಾಲ್ಲೂಕಿನ ಮೊಸಳೆಹೊಸಳ್ಳಿ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಗಣೇಶ ಮೂರ್ತಿ ಮೆರವಣಿಗೆ ವೇಳೆ ಕ್ಯಾಂಟರ್ ಡಿಕ್ಕಿಯಾಗಿ 10 ಜನರು ಮೃತಪಟ್ಟ ಸ್ಥಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ವಿಪಕ್ಷ ನಾಯಕ ಆರ್. ಅಶೋಕ್ ಭೇಟಿ ನೀಡಿದರೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಹಿಮ್ಸ್‌ನಲ್ಲಿ ಗಾಯಾಳುಗಳ ಆರೋಗ್ಯ ಪರಿಶೀಲಿಸಿದರು.



## ಸೋಲು-ಗೆಲುವು ಸಮಾನವಾಗಿ ಸ್ವೀಕರಿಸಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಸೋಲು-ಗೆಲುವು ಕ್ರೀಡೆಯಲ್ಲಿ ಸಹಜ. ಫಲಿತಾಂಶ ಏನೇ ಬಂದರೂ ಕ್ರೀಡಾಪಟುಗಳು ಅದನ್ನು ಸಮಾನವಾಗಿ ಕ್ರೀಡಾ ಸ್ಫೂರ್ತಿಯಿಂದ ಸ್ವೀಕರಿಸಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ಸುಭಾಷ್ ಮೈದಾನದಲ್ಲಿ ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರ ಸಂಘದಿಂದ ಆಯೋಜಿಸಿದ್ದ ತಾಲ್ಲೂಕು ಮಟ್ಟದ ಹಿರಿಯ ಪ್ರಾಥಮಿಕ ಶಾಲೆಗಳು ಹಾಗೂ ಪ್ರೌಢಶಾಲೆಗಳ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿ, ಸೋಲು-ಗೆಲುವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಅವುಗಳನ್ನು ಸಮಾನ ಮನೋಭಾವದಿಂದ ನೋಡಿದಾಗ ಮಾತ್ರ ಕ್ರೀಡೆಯಲ್ಲಿ ತೊಡಗಿಕೊಳ್ಳಲು ಸಾಧ್ಯ. ಶಿಕ್ಷಣದ ಜೊತೆಗೆ ಕ್ರೀಡೆ ಅಗತ್ಯ. ಉತ್ತಮ ಆರೋಗ್ಯವಿರುವ ದೇಹದಲ್ಲಿ ಆರೋಗ್ಯಕರ ಮನಸ್ಸು ಇರುತ್ತದೆ. ಕ್ರೀಡೆಯನ್ನು ಕ್ರೀಡೆಯಾಗಿ ಸ್ವೀಕರಿಸಿ, ತೀರ್ಪುಗಾರರ ತೀರ್ಪು ಗೌರವಿಸಿ, ಸಂತೋಷದಿಂದ ಕ್ರೀಡಾಕೂಟದಲ್ಲಿ ಪಾಲ್ಗೊಂಡು ನಂತರ ಶಾಲೆಗೆ ಹಿಂತಿರುಗಬೇಕು ಎಂದು ಕಿವಿಮಾತು ಹೇಳಿದರು.



ಜೀವನದಲ್ಲಿ ಕ್ರೀಡೆ ಪ್ರಮುಖ ಪಾತ್ರ ವಹಿಸುತ್ತದೆ.

ನಿರಂತರ ಕ್ರೀಡೆ, ವ್ಯಾಯಾಮದಿಂದ ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ. ಹಿಂದಿನ ದಿನಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ನಮ ದೇಶ ಅಷ್ಟಾಗಿ ಸಾಧನೆ ಮಾಡುತ್ತಿರಲಿಲ್ಲ. ಈಗ ಕೇಂದ್ರ ಸರ್ಕಾರ ಕ್ರೀಡಾಪಟುಗಳಿಗೆ ಹೆಚ್ಚಿನ ಸವಲತ್ತು ನೀಡುತ್ತಿರುವುದರಿಂದ, ಕ್ರೀಡೆಯಲ್ಲಿ ಭಾರತ ಗಮನಾರ್ಹ ಸಾಧನೆ ಮಾಡುತ್ತಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪಾ ಮಾತನಾಡಿ, ಓದಿನ ಜೊತೆಗೆ ಕ್ರೀಡಾ ಚಟುವಟಿ-ಕೆಗಳು ವಿದ್ಯಾರ್ಥಿಗಳಿಗೆ ಅಗತ್ಯ. ವಿದ್ಯಾರ್ಥಿಗಳು ಯಾವುದಾದರೂ ಒಂದು ಕ್ರೀಡೆಯಲ್ಲಿ ತೊಡಗಿಸಿಕೊಂಡರೆ ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ತಾಲ್ಲೂಕು ಮಟ್ಟದಲ್ಲಿ ಗೆದ್ದ ವಿದ್ಯಾರ್ಥಿಗಳು ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಸಾಧನೆ ಮಾಡಬೇಕು ಎಂದು ಹೇಳಿದರು.

ದೈಹಿಕ ಶಿಕ್ಷಣ ಪರಿವೀಕ್ಷಕ ಕುಶ್ವಂತ್, ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ತಮಣ್ಣ ಶೆಟ್ಟಿ, ಗ್ರಾ.ಪಂ. ಸದಸ್ಯ ಕಾರ್ತಿಕ್, ಖಾಸಗಿ ಶಾಲೆಗಳ ಒಕ್ಕೂಟದ ತಾಲ್ಲೂಕು ಅಧ್ಯಕ್ಷ ಮಲ್ನಾಡ್ ಜಾಕೀರ್, ಇನ್ನು ಮುಂತಾದವರು ಇದ್ದರು.

## ಲೋಕ ಅದಾಲತ್‌ನಿಂದ ಉತ್ತಮ ಫಲಿತಾಂಶ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ರಾಜಿ ಸಂಧಾನದ ಮೂಲಕ ಜಿಲ್ಲೆಯಲ್ಲಿ 3 ಜೋಡಿಗಳು ಒಂದಾಗಿದ್ದು ಲೋಕ್ ಅದಾಲತ್ ಯಶಸ್ವಿಯಾಗಿದೆ. 5,83,545 ಪ್ರಕರಣಗಳಲ್ಲಿ ಉಭಯ ಕಕ್ಷಿದಾರರು ಫಲಾನುಭವಿಗಳಾಗಿದ್ದಾರೆ ಎಂದು ಪ್ರಧಾನ ಜಿಲ್ಲಾ ನ್ಯಾಯಾಧೀಶೆ ಹೇಮಾವತಿ ತಿಳಿಸಿದರು.

ರಾಷ್ಟ್ರೀಯ ಹಾಗೂ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ನಡೆದ ರಾಷ್ಟ್ರೀಯ ಲೋಕ್ ಅದಾಲತ್ ನಲ್ಲಿ ಜಿಲ್ಲೆಯ ಒಟ್ಟು 42 ನ್ಯಾಯಾಲಯಗಳಲ್ಲಿ ಸಂಧಾನ ಪ್ರಕ್ರಿಯೆಯು ಜರುಗಿದ್ದು ಉತ್ತಮವಾದ ಫಲಿತಾಂಶ ಹೊರಬಿದ್ದಿದೆ ಎಂದು ತಿಳಿಸಿದರು.



ನ್ಯಾಯಾಲಯಗಳಲ್ಲಿ ಒಟ್ಟು 94,106 ಪ್ರಕರಣಗಳು ಬಾಕಿ ಉಳಿದಿದ್ದು, ರಾಷ್ಟ್ರೀಯ ಲೋಕ್ ಅದಾಲತ್‌ಗಾಗಿ 6,045 ಪ್ರಕರಣಗಳು ಹಾಗೂ 5,88,784 ವ್ಯಾಜ್ಯಪೂರ್ವ ಪ್ರಕರಣಗಳನ್ನು ಗುರುತಿಸಲಾಗಿ-ತ್ತು. ನ್ಯಾಯಾಲಯದಲ್ಲಿ ಬಾಕಿ ಉಳಿದಿದ್ದ ರಾಜಿ ಮಾಡಬಹುದಾಗಿದ್ದ ಕ್ರಿಮಿನಲ್ ಪ್ರಕರಣಗಳು 106, ಚೆಕ್ ಅಮಾನ್ಯ ಪ್ರಕರಣಗಳು 170, ಬ್ಯಾಂಕ್ ವಸೂಲಾತಿ 90, ವಿದ್ಯುತ್ ಕಾಯ್ದೆಯ ಪ್ರಕರಣಗಳು 40, ಭೂ ಸ್ವಾಧೀನದ 50, ಮೋಟಾರು ವಾಹನ ಪರಿಹಾರದ ಪ್ರಕರಣಗಳು 60, ಕೌಟುಂಬಿಕ ಪ್ರಕರಣ 13, ಇತರೆ ಸಿವಿಲ್ 364, ಇತರೆ ಕ್ರಿಮಿನಲ್ 2,075 ಸೇರಿ ಒಟ್ಟು 2,925 ಪ್ರಕರಣಗಳು ಮತ್ತು ವ್ಯಾಜ್ಯಪೂರ್ವ ಪ್ರಕರಣಗಳಾದ ಬ್ಯಾಂಕ್ ಸಾಲ ವಸೂಲಾತಿ ಪ್ರಕರಣಗಳು 263, ಟ್ರಾಫಿಕ್ ಚಲನ್ ಪ್ರಕರಣಗಳು 1994, ಮನೆಕಂದಾಯದ ಪ್ರಕರಣಗಳು 4,27,151, ನೀರಿನ ಕರ ವಸೂಲಿ ಪ್ರಕರಣಗಳು 1,51,212, ಸೇರಿ ಒಟ್ಟು 5,80,620 ಪ್ರಕರಣಗಳು ಇತ್ಯರ್ಥಗೊಂಡು ಒಟ್ಟು 6,68,22,850 ರೂಪಾಯಿ ಹಣ ವಸೂಲಾಗಿದೆ. ಜಿಲ್ಲಾದ್ಯಂತ ಒಟ್ಟು 5,83,545 ಪ್ರಕರಣಗಳು ಇತ್ಯರ್ಥಗೊಂಡಿವೆ ಎಂದು ತಿಳಿಸಿದರು.

# ಮೊಸಳೆಹೊಸಳ್ಳಿ ದುರಂತಕ್ಕೆ ಕಂಬನಿ ಮಿಡಿದ ನಿಖಿಲ್



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ತಾಲ್ಲೂಕಿನ ಮೊಸಳೆಹೊಸಳ್ಳಿ ಗ್ರಾಮದಲ್ಲಿ ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ಕ್ಯಾಂಟರ್ ಡಿಕ್ಕಿಯಿಂದ 10 ಜನರು ಮೃತಪಟ್ಟ ಪ್ರಕರಣಕ್ಕೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕಂಬನಿ ಮಿಡಿದರು.

ಶುಕ್ರವಾರ ರಾತ್ರಿ 1 ಗಂಟೆಗೆ ಹಿಮ್ಸ್‌ಗೆ ಭೇಟಿ ನೀಡಿದ ಅವರು, ಮೃತರ ಅಂತಿಮ ದರ್ಶನ ಪಡೆದು ಗಾಯಾಳುಗಳಿಗೆ ಸಾಂತ್ವನ ಹೇಳಿದರು. ಇದೆ ವೇಳೆ ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳುವಾಗ ಭಾವುಕರಾದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಘೋರ ದುರಂತದಿಂದ ಸಾಕಷ್ಟು ನೋವಾಗಿದೆ. ಮಕ್ಕಳ ಮೇಲೆ ಪೋಷಕರು ಕನಸು ಕಂಡಿರುತ್ತಾರೆ. ಈ ಘಟನೆಯಿಂದ ಅವರ ಮನಸಿನ ಮೇಲೆ ಆದ ನೋವನ್ನು ದೂರ ಮಾಡಲು ಸಾಧ್ಯವಿಲ್ಲ. ತಾಯಿ ಚಾಮುಂಡೇಶ್ವರಿ ಎಲ್ಲರಿಗೂ ನೋವು ಭರಿಸುವ ಶಕ್ತಿ ಕರುಣಿಸಲಿಯೆಂದು ಪ್ರಾರ್ಥಿಸಿದರು.

ದುರ್ಘಟನೆಯಲ್ಲಿ ಕಳೆದುಕೊಂಡ ಜೀವಕ್ಕೆ ಯಾರು ಬೆಲೆ ಕಟ್ಟುವುದಕ್ಕೆ ಆಗುವುದಿಲ್ಲ. ಅದರಲ್ಲೂ ಅವರ ತಂದೆ-ತಾಯಿ ಮಕ್ಕಳ ಕಂಡಿದ್ದ ಕನಸು ಮಣ್ಣುಪಾಲಾಗಿದೆಯೆಂದರು.

ದುರಂತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ರಾಜ್ಯ ಸರ್ಕಾರ 5 ಲಕ್ಷ ರೂ. ಪರಿಹಾರ ಘೋಷಿಸಿದೆ. ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ತಿಳಿದು ಮಾನವೀಯತೆ ದೃಷ್ಟಿಯಿಂದ ಸರ್ಕಾರ ಹೆಚ್ಚು ಪರಿಹಾರ ಘೋಷಣೆ ಮಾಡಬೇಕೆಂದು ಆಗ್ರಹಿಸಿದರು.

ಈ ಘಟನೆಯನ್ನು ನಾವು ಯಾರೂ ಊಹೆ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ದುರಂತದ ವಿಡಿಯೋ ನೋಡಿ ನಾವೆಲ್ಲರೂ ಬೆಚ್ಚಿಬಿದ್ದಿದ್ದೇವೆ. ಪ್ರಕರಣದ ಸತ್ಯಾಸತ್ಯತೆ ತಿಳಿಯಲು ಸಮಗ್ರ ತನಿಖೆಗೆ ಒಳಪಡಿಸಬೇಕೆಂದು ಒತ್ತಾಯಿಸಿದರು.

ಹಾಸನ ವಿಧಾನಸಭಾ ಕ್ಷೇತ್ರ ಶಾಸಕ ಹೆಚ್.ಪಿ. ಸ್ವರೂಪ್, ಕೆ.ಆರ್. ಪೇಟೆ ಶಾಸಕ ಹೆಚ್.ಟಿ. ಮಂಜು ಮತ್ತಿತರರಿದ್ದರು.

# ಸರ್ವೆಯರ್‌ಗಳಿಂದ ನ್ಯಾಯಾಲಯಕ್ಕೆ ತಪ್ಪು ಮಾಹಿತಿ: ಆರೋಪ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಸಕಲೇಶಪುರ ತಾಲ್ಲೂಕಿನ ಭೂಮಾಪನ ಕಚೇರಿ ನೌಕರರು ಹಣದ ಆಮಿಷಕ್ಕೆ ಬಲಿಯಾಗಿ ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿ ನಮಗೆ ಮೋಸ ಮಾಡಿದ್ದಾರೆಂದು ಗೊದ್ದು ಗ್ರಾಮದ ಹೆಚ್.ಎನ್. ಬೋಜೇಗೌಡ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಸರ್ವೆ ನಂ.93/2ರಲ್ಲಿ ನನ್ನ ಪತ್ನಿ ಜ್ಯೋತಿ ಹೆಸರಿನಲ್ಲಿ 4 ಎಕರೆ 38 ಗುಂಟೆ ಕಾಫಿ ತೋಟವಿದೆ. ಇದು ಪೋಡಿ ಆದಾಗ ನಾಲ್ಕು ಭಾಗ ಮಾಡಲಾಯಿತು. ಆದರೆ ಜ್ಯೋತಿ ಅವರ ಚಿಕ್ಕಪ್ಪ ಜಿ.ಆರ್. ಮಲ್ಲೇಶ್ ಎಂಬುವವರು ಒತ್ತುವರಿ ಮಾಡಿಕೊಂಡಿದ್ದ ಜಮೀನನ್ನು ಬಿಡಲು ಒಪ್ಪದಿದ್ದಾಗ ನಾನು ಸಕಲೇಶಪುರ ಸಿವಿಲ್ ಹಿರಿಯ ನ್ಯಾಯಾಲಯದ ಮೆಟ್ಟಿಲೇರಿದ್ದೆ ಎಂದರು.

ನ್ಯಾಯಾಲಯದ ಸೂಚನೆ ಮೇರೆಗೆ ಸಕಲೇಶಪುರ ಭೂಮಾಪನ ಕಚೇರಿಯಿಂದ ಮನು ಎಂಬ ಸರ್ವೆಯರ್ ತೋಟಕ್ಕೆ ಬಂದು ಮೂಲ ಟಿಪ್ಪಣಿಯಂತೆ ಸರ್ವೆ ಮಾಡುವುದಾಗಿ ಹೇಳಿದರು. ಅದಾದ ಬಳಿಕ 2ನೇ ಬಾರಿಗೂ ಅವರೇ ಸರ್ವೆ ಮಾಡಲು ಬಂದಿದ್ದರು.

ಈ ವೇಳೆ ಮಲ್ಲೇಶ್ ಹಾಗೂ ಅವರ ಮಗ ಸಂತೋಷ್ ಅವರ ಒತ್ತಾಯಕ್ಕೆ ಮಣಿದು ಸುಳ್ಳು ಹೇಳಿ ತೋಟದ ಮೂಲ ಸ್ಕೆಚ್ ಇಲ್ಲವೆಂದು, ಇದ್ದರೂ ತಾಂತ್ರಿಕ ದೋಷವಿದೆ ಎಂದು ತಪ್ಪು ವರದಿ ಸಿದ್ಧಪಡಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ಈ ಮೂಲಕ ಕೋರ್ಟ್‌ಗೆ ಸುಳ್ಳು ಮಾಹಿತಿ ನೀಡಿದ್ದಾರೆ. ಅದನ್ನು ಆಧರಿಸಿ ಕೋರ್ಟ್ ನಮ ಪ್ರಕರಣವನ್ನು ಕೈ ಬಿಟ್ಟಿದೆ ಎಂದರು.

ನೌಕರರ ಲಂಚದಾಹಕ್ಕೆ ನಮ ಕುಟುಂಬಕ್ಕೆ ಮಾತ್ರವಲ್ಲ, ನ್ಯಾಯಾಲಯದ ಗೌರವಕ್ಕೂ ಧಕ್ಕೆಯಾಗಿದೆ. ಸುಮಾರು 15 ವರ್ಷಗಳ ಹಿಂದೆ ಮೂಲ ಟಿಪ್ಪಣಿಯಂತೆ ಸರ್ವೆ ನಡೆಸಿ ಅಣ್ಣ ತಮಂದಿರ ಒಪ್ಪಿಗೆಯೊಂದಿಗೆ ಕಾನೂನು ಬದ್ಧ ದಾಖಲೆಗಳೂ ಸಿದ್ಧವಾಗಿದ್ದವು. ಆದರೀಗ ಅದನ್ನೇ ನಿರ್ಲಕ್ಷ್ಯ ಮಾಡಿ ಸುಳ್ಳು ಸ್ಕೆಚ್ ತಯಾರಿಸಿ ನ್ಯಾಯಾಲಯಕ್ಕೂ ಸಲ್ಲಿಸುವ ಮೂಲಕ ನಮಗೆ ಮಾನಸಿಕ ಕಿರುಕುಳ ಹಾಗೂ ಆರ್ಥಿಕ ಹಾನಿ ಉಂಟಾಗಿದೆ.

ಹತ್ತು ವರ್ಷಗಳಿಂದ ನ್ಯಾಯಕ್ಕಾಗಿ ಹೋರಾಟ ನಡೆಸುತ್ತಿದ್ದೇವೆ, ಹೀಗಾದರೆ ಬಡವರಿಗೆ ನ್ಯಾಯ ಸಿಗೋದು ಹೇಗೆ ಎಂದು ಪ್ರಶ್ನಿಸಿದರು. ಸರ್ವೆಯರ್ ಮನು ಹಾಗೂ ಪುನೀತ್ ಇಬ್ಬರೂ ನಮ ಪ್ರತಿವಾದಿಗಳ ಆಮಿಷಕ್ಕೆ ಮಣಿದು ಸತ್ಯ ಮರೆ ಮಾಚಿದರು. ಅದರಿಂದ ನಮ ಹಕ್ಕು ಕಳೆದು ಹೋಗುವಂತಾಗಿದೆ.

ತಪ್ಪು ಸ್ಕೆಚ್ ಸಿದ್ಧಪಡಿಸಿ ನ್ಯಾಯಾಲಯಕ್ಕೆ ಸುಳ್ಳು ವರದಿ ಸಲ್ಲಿಸಿದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಆಗಬೇಕು, ನಮಗೆ ನ್ಯಾಯ ಸಿಗಬೇಕು ಎಂದು ಮನವಿ ಮಾಡಿದರು.

ಪತ್ನಿ ಜ್ಯೋತಿ ಹಾಗೂ ಅವರ ದೊಡ್ಡಪ್ಪ ಸುಬ್ರಹ್ಮಣ್ಯ ಇದ್ದರು.

# ತ್ಯಾಜ್ಯ ರಾಶಿಗೆ ಬೆಂಕಿ: ಸಾರ್ವಜನಿಕರಿಗೆ ತೊಂದರೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಪಟ್ಟಣದ ಹಳೆಯ ತಾಲ್ಲೂಕು ಕಚೇರಿ ಆವರಣದಲ್ಲಿ ಕಸದ ರಾಶಿಗೆ ಬೆಂಕಿ ಹಾಕಿದ್ದು ಸಾರ್ವಜನಿಕರು ದಟ್ಟ ಹೊಗೆ ಹಾಗೂ ವಾಸನೆಯಿಂದ ಕಿರಿಕಿರಿ ಅನುಭವಿಸುವಂತಾಗಿದೆ.

ಪಟ್ಟಣದ ಹೃದಯ ಭಾಗದಲ್ಲಿರುವ ಶತಮಾನ ಪೂರೈಸಿದ ಹಳೆಯ ತಾಲ್ಲೂಕು ಕಚೇರಿ ಸದ್ಯ ಕಸಬಾ ಹೋಬಳಿಗೆ ಒಳಪಟ್ಟ ಕಚೇರಿಗಳು ಹಾಗೂ ಇನ್ನಿತರ ಜನರ ಉಪಯೋಗಕ್ಕೆ ಬಳಕೆಯಾಗುತ್ತಿದೆ. ಕಚೇರಿಯ ಸುತ್ತಲಿನ ಕಸಕ್ಕೆ ಇಲ್ಲಿನ ಸಿಬ್ಬಂದಿ ಮುನ್ನೆಚ್ಚರಿಕೆ ಇಲ್ಲದೆ ಬೆಂಕಿಯನ್ನು ಹಾಕಿದ ಪರಿಣಾಮ ಬೆಂಕಿಯ ಕೆನ್ನಾಲಿಗೆಗೆ ತಾ.ಪಂ.ಸಾಮರ್ಥ್ಯ ಸೌಧ, ಪೊಲೀಸ್ ಸ್ಟೇಷನ್, ಅಂಗಡಿ ಮಳಿಗೆಗಳು ಸೇರಿದಂತೆ ಜನವಸತಿ ಕೇಂದ್ರಗಳ ಸುತ್ತ ಹೊಗೆ ಸುತ್ತುವರಿದ ಹಿನ್ನೆಲೆಯಲ್ಲಿ ಜನರು ತೀವ್ರ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಕಳೆದ ಮೂರು ದಿನಗಳಿಂದಲೂ ಕೂಡ ಹೊಗೆ ತೀವ್ರ ಪರಿಣಾಮವನ್ನು ಕಂಡರೂ ಕೂಡ ಅಧಿಕಾರಿ, ಸಿಬ್ಬಂದಿ ಯಾವುದೇ ಕ್ರಮ ಕೈಗೊಳ್ಳದೆ ಜಾಣ ಮೌನಕ್ಕೆ ಜಾರಿದ್ದಾರೆ. ಈಗಾಗಲೇ ಪುರಸಭೆ ಮೌಖಿಕವಾದಂತ ಆದೇಶವನ್ನು ನೀಡಿದ್ದರೂ ಕೂಡ ಇಲ್ಲಿನ ಅಧಿಕಾರಿಗಳು ಕ್ಯಾರೆ ಎಂದಿಲ್ಲ. ಬೆಂಕಿಯ ಕಿಡಿ ತಾಲ್ಲೂಕು ಪಂಚಾಯಿತಿ ಅಥವಾ ಇನ್ನಿತರ ಕಡೆ ಹರಡಿದರೆ ಗತಿ ಏನು. ತಾಲ್ಲೂಕು ಪಂಚಾಯಿತಿ ಮತ್ತು ಹಳೆ ತಾಲ್ಲೂಕು ಕಚೇರಿಯಲ್ಲಿ ಕಡತಗಳಿದ್ದು ಈ ಕಡತಗಳ ಬಗ್ಗೆ ಏಕೆ ಯೋಚನೆಯನ್ನು ಮಾಡುತ್ತಿಲ್ಲ ಅದಲ್ಲದೆ ಹಳೆ ತಾಲ್ಲೂಕು ಕಚೇರಿ ಹಿಂಭಾಗದಲ್ಲಿ ಅಧಿಕಾರಿಗಳ ವಸತಿ ಗೃಹಗಳು ಮತ್ತು ಜನರ ವಸತಿಗೃಹಗಳು ಕೂಡ ಇದ್ದು ಅವುಗಳಿಗೆ ಹಾನಿಯಾಗುವುದಿಲ್ಲವೇ. ಈ ಬಗ್ಗೆ ಸಂಬಂಧಪಟ್ಟವರು ಗಮನ ಹರಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಸ್ಥಳೀಯರಾದ ಚನ್ನೇಗೌಡರ ಬೀದಿಯ ಶಂಕರ್ ಮಾತನಾಡಿ, ಮೂರು ದಿನಗಳಿಂದಲೂ ಕೂಡ ತಾ.ಪಂ. ಮತ್ತು ಹಳೆ ತಾಲೂಕು ಕಚೇರಿಯ ಮಧ್ಯೆ ಜಾಗದಲ್ಲಿ ಕಸಕ್ಕೆ ಬೆಂಕಿ ಹಾಕಿದ ಪರಿಣಾಮದಿಂದ ಬೆಂಕಿಯ ತೀವ್ರತೆ ಹೆಚ್ಚಾಗಿ ಸುತ್ತಲಿನ ಜನ ನಿಜಕ್ಕೂ ಆತಂಕ ಒಳಾಗಿದ್ದಾರೆ. ಈ ಬಗ್ಗೆ ಇಲ್ಲಿ ಕೆಲವೊಬ್ಬ ಅಧಿಕಾರಿ ಸಿಬ್ಬಂದಿಯನ್ನು ಕೇಳಿದರೆ ಅವರು ಉಡಾಫೆಯಿಂದ ವರ್ತಿಸುತ್ತಾರೆ. ಒಂದು ವೇಳೆ ಬೆಂಕಿಯ ತೀವ್ರತೆ ಹೆಚ್ಚಾಗಿ ಅನಾಹುತ ಸಂಭವಿಸಿದರೆ ಅದಕ್ಕೆ ಹೊಣೆಗಾರರು. ಪುರಸಭೆಯ ಮೌನವೇಕೆ ಎಂದು ಪ್ರಶ್ನಿಸಿದ್ದಾರೆ.

ತಹಶೀಲ್ದಾರ್ ಶ್ರೀಧರ್ ಕಂಕನವಾಡಿ ಮಾತನಾಡಿ, ಕಸವನ್ನು ಪುರಸಭೆ ಕಸ ವಿಲೇವಾರಿ ವಾಹನಕ್ಕೆ ನೀಡಬೇಕು. ಅದನ್ನು ಬಿಟ್ಟು ಬೆಂಕಿ ಹೆಚ್ಚುವುದು ತಪ್ಪು. ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದರು.

# ಜಿಲ್ಲೆಯ ಜನಪ್ರತಿನಿಧಿಗಳೊಂದಿಗೆ ಸಚಿವ ಕೃಷ್ಣಬೈರೇಗೌಡ ಸಭೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಹಾಸನಾಂಬ ಜಾತ್ರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನಲೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಬೆಂಗಳೂರಿನ ಕುಮಾರಕೃಪಾ ಅತಿಥಿ ಗೃಹದಲ್ಲಿ ಜಿಲ್ಲೆಯ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದರು.

ಅ. 9 ರಿಂದ 23ರ ವರೆಗೆ ಜಾತ್ರೆ ನೆರವೇರಲಿದೆ. ಜಿಲ್ಲಾಡಳಿತ ಈಗಾಗಲೇ ಹಾಸನಾಂಬ ಹಾಗು ಸಿದ್ದೇಶ್ವರ ಜಾತ್ರಾ ಮಹೋತ್ಸವಕ್ಕೆ ಸಿದ್ಧತೆ ನಡೆಸಿದ್ದು ಉಸ್ತುವಾರಿ ಸಚಿವರು ಸಹ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಭೆ ನಡೆಸಿದ್ದರು.

ಹಾಸನಾಂಬ ದರ್ಶನಕ್ಕೆ ಬರುವ ಶಾಸಕರು, ಸಚಿವರು, ನ್ಯಾಯಾಧೀಶರು ಹಾಗೂ ಸಂಸದರ ಜೊತೆಗೆ 10 ಜನರಿಗೆ ಮಾತ್ರ ಅವಕಾಶ ಮಾಡಿಕೊಡಬೇಕೆಂದು ಸಚಿವ ಕೃಷ್ಣಬೈರೇಗೌಡ ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ಅದಕ್ಕೆ ಜಿಲ್ಲೆಯ ಶಾಸಕರು, ಸಂಸದರು ಒಪ್ಪಿಗೆ ಸೂಚಿಸಿದರು. ಅತಿಥಿ ಗಣ್ಯರು ಮೊದಲೇ ಬಂದು ಪ್ರವಾಸಿ ಮಂದಿರದಲ್ಲಿ ತಮ ಕಾರು ನಿಲ್ಲಿಸಿ ಜಿಲ್ಲಾಡಳಿತದಿಂದ ನಿಯೋಜನೆ ಮಾಡುವ ವಾಹನಗಳಲ್ಲಿ ದೇವಸ್ಥಾನಕ್ಕೆ ತೆರಳಬೇಕು. ಅವರ ಜೊತೆಗೆ ಬೇರೆ ವಾಹನಗಳು ಹೋಗದಂತೆ ನೋಡಿಕೊಳ್ಳಬೇಕು. ವಿನಾಕಾರಣ ಗೊಂದಲ ಉಂಟಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದರು.

ಸಭೆಯಲ್ಲಿ ಶಾಸಕರಾದ ಕೆ.ಎಂ. ಶಿವಲಿಂಗೇಗೌಡ, ಎ. ಮಂಜು, ಸಿ.ಎನ್. ಬಾಲಕೃಷ್ಣ, ಸಿಮೆಂಟ್ ಮಂಜು, ಹೆಚ್.ಕೆ. ಸುರೇಶ್, ಹೆಚ್.ಪಿ. ಸ್ವರೂಪ್, ಸಂಸದ ಶ್ರೇಯಸ್ ಪಟೇಲ್, ವಿಧಾನ ಪರಿಷತ್ ಸದಸ್ಯರಾದ ಡಾ. ಸೂರಜ್ ರೇವಣ್ಣ, ಮಧು ಮಾದೇಗೌಡ, ವಿವೇಕಾನಂದ ಇದ್ದರು.

## ಅದ್ವಾನ ತಡೆಗೆ ಮುನ್ನೆಚ್ಚರಿಕೆ

ವರ್ಷಕ್ಕೊಮೆ ದರ್ಶನ ಭಾಗ್ಯ ಕರುಣಿಸುವ ಹಾಸನಾಂಬ ದೇವಸ್ಥಾನಕ್ಕೆ ರಾಜ್ಯ ಮಾತ್ರವಲ್ಲದೆ ಹೊರ ಜಿಲ್ಲೆಯಿಂದಲೂ ಭಕ್ತರು ಬರುತ್ತಾರೆ. ಸಾರ್ವಜನಿಕರು ಮಾತ್ರವಲ್ಲದೆ ಜನಪ್ರತಿನಿಧಿಗಳು, ಸಿನಿಮಾ ನಟ-ನಟಿಯರು, ನ್ಯಾಯಾಧೀಶರು ಆಗಮಿಸುವುದರಿಂದ ಅಚ್ಚುಕಟ್ಟು ವ್ಯವಸ್ಥೆಗೆ ಜಿಲ್ಲಾಡಳಿತ ಕ್ರಮ ವಹಿಸಬೇಕಿದೆ. ಕಳೆದ ವರ್ಷ ವಿಐಪಿ ಹಾಗೂ ವಿವಿಐಪಿ ಪಾಸ್‌ಗಳನ್ನು ಬೇಕಾಬಿಟ್ಟಿ ವಿತರಿಸಿದ್ದರಿಂದ ನೂಕುನುಗ್ಗಲು ಉಂಟಾಗಿ ಅದ್ವಾನವಾಗಿತ್ತು. ಅಂತಹ ಪರಿಸ್ಥಿತಿ ಮತ್ತೆ ಉದ್ಭವಿಸಬಾರದೆಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಜನಪ್ರತಿನಿಧಿಗಳ ಸಲಹೆ-ಸೂಚನೆ ಪಡೆದಿದ್ದಾರೆ.

# ಕಳಪೆ ಬಿತ್ತನೆ ಬೀಜ ವಿತರಣೆ: ರೈತರ ಆಕ್ರೋಶ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಕೃಷಿ ಇಲಾಖೆಯಿಂದ ವಿತರಿಸಲಾದ ಬಿತ್ತನೆ ಭತ್ತ ಸಂಪೂರ್ಣ ಕಳಪೆಯಾಗಿದ್ದು ಪೈರು ಬೆಂಕಿ ರೋಗಕ್ಕೆ ತುತ್ತಾಗಿ ಹಾನಿಗೀಡಾಗಿದೆ.

ತಾಲ್ಲೂಕಿನ ರಾಮನಾಥಪುರ ಹೋಬಳಿ ರುದ್ರಪಟ್ಟಣ ಗ್ರಾಮ ಸೇರಿ ಸುತ್ತಲಿನ ಹಳ್ಳಿಗಳಲ್ಲಿ ಸಮಸ್ಯೆ ಕಾಣಿಸಿಕೊಂಡಿದೆ. ಅಧಿಕಾರಿಗಳು ಮಾಡಿದ ತಪ್ಪಿಗೆ ರೈತರು ಸಂಕಷ್ಟ ಎದುರಿಸುವಂತಾಗಿದೆ. ಗ್ರಾಮದ ನಿತಿನ್ ಅವರು ತಮ ಜಮೀನಿನಲ್ಲಿ ಭತ್ತದ ಬೆಳೆ ಕೈಗೊಂಡಿದ್ದರು. ಈ ವರ್ಷ ಉತ್ತಮ ಮಳೆಯಾಗಿದ್ದು ಅಧಿಕ ಇಳುವರಿ ಬರುವ ನಿರೀಕ್ಷೆಯಲ್ಲಿದ್ದರು. ಏಕಾಏಕಿ ಪೈರು ಕಂದು ಬಣ್ಣಕ್ಕೆ ತಿರುಗಿದೆ. ರೋಗ ಹತೋಟಿಗೆ ತರಲು ಎಷ್ಟೇ ಕ್ರಿಮಿನಾಶಕ ಸಿಂಪಡಿಸಿದರೂ ಪ್ರಯೋಜನವಾಗಿಲ್ಲ. ದಿಢೀರನೆ ಪೈರಿಗೆ ಬೆಂಕಿ ರೋಗ ಹರಡಲು ಕಳಪೆ ಬಿತ್ತನೆ ಭತ್ತ ಕಾರಣವೆಂದು ರೈತರು ಆರೋಪಿಸಿದ್ದಾರೆ.

ಈ ಕುರಿತು ಕೃಷಿ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಿದರೂ ಸಕಾರಾತಕ ಪ್ರತಿಕ್ರಿಯೆ ಬಂದಿಲ್ಲ. ಸಾಲ ಸೋಲ ಮಾಡಿ ಮಾಡಿ ಬೆಳೆ ಕೈಗೊಂಡಿದ್ದ ರೈತರು ಈಗ ಕಣ್ಣೀರಿನಲ್ಲಿ ಕೈ ತೊಳೆಯುವಂತಾಗಿದೆ. ರೈತ ನಿತಿನ್ ಅವರು ಮಾತನಾಡಿ, ರಾಷ್ಟ್ರೀಯ ಬೀಜ ನಿಗಮ ವಿತರಿಸಿದ ಬೀಜ ಸಂಪೂರ್ಣ ಕಳಪೆಯಾಗಿದೆ. ಕೃಷಿ ಇಲಾಖೆ ಅಧಿಕಾರಿಗಳು ನಮ ಮನವಿಗೆ ಸ್ಪಂದಿಸದೆ ಉಡಾಫೆ ಉತ್ತರ ನೀಡುತ್ತಿದ್ದಾರೆ. ಈ ವರ್ಷ ಅಧಿಕ ಆದಾಯದ ನಿರೀಕ್ಷೆಯಲ್ಲಿದ್ದ ರೈತರಿಗೆ ತೊಂದರೆಯಾಗಿದೆ. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ನಷ್ಟಕ್ಕೀಡಾಗಿರುವ ಬೆಳೆಗೆ ಪರಿಹಾರ ಕಲ್ಪಿಸಬೇಕೆಂದು ಆಗ್ರಹಿಸಿದರು.

# ಶಿಕ್ಷಕನ ವರ್ಗಾವಣೆ ಖಂಡಿಸಿ ವಿದ್ಯಾರ್ಥಿಗಳ ಪ್ರತಿಭಟನೆ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ತಾಲ್ಲೂಕಿನ ಅಮನಬ್ಯಾಡರಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ತೀರ್ಥಕುಮಾರ್ ಅವರ ವರ್ಗಾವಣೆ ಖಂಡಿಸಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಶಾಲೆಯ ಸಮಗ್ರ ಅಭಿವೃದ್ದಿಗೆ ಕೊಡುಗೆ ನೀಡುವ ಮೂಲಕ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗಿ ನಿಷ್ಠೆಯಿಂದ ಶಿಕ್ಷಕ ವೃತ್ತಿ ನಿರ್ವಹಿಸಿದ ವ್ಯಕ್ತಿಯನ್ನು ಬೇರೆ ಕಡೆ ವರ್ಗಾವಣೆ ಮಾಡುವುದು ಬೇಡವೆಂದು ವಿದ್ಯಾರ್ಥಿಗಳು ಪಟ್ಟು ಹಿಡಿದರು.

ಎಸ್‌ಡಿಎಂಸಿ ಅಧ್ಯಕ್ಷ ಮಂಜುನಾಥ್ ಹಾಗೂ ಸದಸ್ಯ ಲೋಕೇಶ್ ಮಾತನಾಡಿ, ಅಮನಬ್ಯಾಡರಹಳ್ಳಿ ಗ್ರಾಮದಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದ ಸಮುದಾಯದವರು ಹೆಚ್ಚಿದ್ದಾರೆ. ಸರ್ಕಾರಿ ಶಾಲೆ ಉಳಿಸಬೇಕು ಎಂಬ ನಿಟ್ಟಿನಲ್ಲಿ ಮನೆ ಮನೆಗೆ ತೆರಳಿ 14 ವಿದ್ಯಾರ್ಥಿಗಳನ್ನು ದಾಖಲಿಸಿಕೊಂಡ ಕೀರ್ತಿ ಶಿಕ್ಷಕರಿಗೆ ಸಲ್ಲುತ್ತದೆ. ಹಿಂದುಳಿದ ವರ್ಗದ ಮಕ್ಕಳು ಶೈಕ್ಷಣಿಕವಾಗಿ ಪ್ರಗತಿ ಸಾಧಿಸಲಿ ಎಂದು ಶಿಕ್ಷಕರು ಸಾಕಷ್ಟು ಕಷ್ಟಪಟ್ಟಿದ್ದಾರೆ ಎಂದರು.

ಮಕ್ಕಳಿಗೆ ಪಠ್ಯದ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳನ್ನು ಕಲಿಸಿದ್ದಾರೆ. ಕ್ರೀಡೆ ಸೇರಿದಂತೆ ಇನ್ನಿತರ ಚಟುವಟಿಕೆಗಳಿಗೆ ಅವರು ನೀಡುತ್ತಿರುವ ಆಸಕ್ತಿಯಿಂದಲೇ ಶಾಲೆಗೆ ಮಕ್ಕಳ ಸಂಖ್ಯೆ ಹೆಚ್ಚಾಗಿದೆ.

ಸರ್ಕಾರ ಹಾಗೂ ಇಲಾಖೆ ಹೆಚ್ಚುವರಿ ಎಂಬ ಮಾನದಂಡದಲ್ಲಿ ತೀರ್ಥಕುಮಾರ್ ವರ್ಗಾವಣೆಗೆ ಮುಂದಾಗಿರುವುದು ಸರಿಯಿಲ್ಲ, ತಕ್ಷಣವೇ ತೀರ್ಥಕುಮಾರ್ ಶಿಕ್ಷಕನ್ನು ಉಳಿಸಬೇಕು ಇಲ್ಲವಾದರೆ ಶಿಕ್ಷಣ ಇಲಾಖೆ ಮುಂದೆ ಉಗ್ರ ಪ್ರತಿಭಟನೆ ನಡೆಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಹೇಮಾ ಮಾತನಾಡಿ, ತೀರ್ಥಕುಮಾರ್ ಶಿಕ್ಷಕರು ನಮ ಶಾಲೆಗೆ ಆಗಮಿಸಿದ ದಿನದಿಂದ ಮಕ್ಕಳ ಕಲಿಕೆ ಪ್ರಗತಿಯಾಗಿದೆ. ಅಲ್ಲದೆ ವಿವಿಧ ಚಟುವಟಿಕೆಗಳನ್ನು ತಿಳಿಸಿದ್ದಾರೆ. ಈಗಾಗಲೇ ಶಿಕ್ಷಕರ ವರ್ಗಾವಣೆಯಿಂದ ಮಕ್ಕಳು ಎರಡು ದಿನದಿಂದ ಶಾಲೆಗೆ ಹೊಗಿಲ್ಲ, ಮೊದಲೆ ಅಮ್ಮನಬ್ಯಾಡರಹಳ್ಳಿ ಕಾಡಿನ ಮದ್ಯೆ ಇರುವ ಕಾರಣದಿಂದ ಕಾಡು ಪ್ರಾಣಿಗಳಿಂದ ಬೇರೆ ಕಡೆ ಹೊಗಲು ಸಾಧ್ಯವಿಲ್ಲ, ಮಕ್ಕಳ ಹಿತದೃಷ್ಟಿಯಿಂದ ಶಿಕ್ಷಕರನ್ನು ಉಳಿಸಿಕೊಡಿ ಎಂದರು.

ಪ್ರತಿಭಟನೆಯಲ್ಲಿ ಗ್ರಾಮಸ್ಥರಾದ ಧರ್ಮ ನಾಯಕ್, ಸಂತೋಷ್, ಪ್ರಕಾಶ್, ಶಿವಶಂಕರ್, ಚಂದ್ರನಾಯಕ್, ತೀರ್ಥಕುಮಾರಿ, ಧನುಷ್, ಸುಂದರಮ, ಪಾರ್ವತಮ, ತುಂಗಮ ಇತರರಿದ್ದರು.



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ರಕ್ತವು ಸದಾ ರಕ್ತನಾಳಗಳಲ್ಲಿ ಸರಾಗವಾಗಿ ಹರಿಯುವಂತೆ ಕಾಪಾಡಿಕೊಂಡರೆ ಹೃದಯಾಘಾತ ಸಂಭವಿಸುವುದನ್ನು ತಡೆಯಬಹುದು ಎಂದು ಹೃದಯ ತಜ್ಞ ಡಾ. ನಿರೂಪ್ ತಿಳಿಸಿದರು.

ಪಟ್ಟಣದ ಆಲೂರು ಕ್ಲಿನಿಕ್ ಆವರಣದಲ್ಲಿ ಇಂಡಿಯಾನ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಹಾರ್ಟ್ ಸೆಂಟರ್, ಹಾಸನ ಮತ್ತು ಆಲೂರು ಕ್ಲಿನಿಕ್ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಉಚಿತ ಹೃದಯ ಮತ್ತು ಮೂಳೆ ತಪಾಸಣಾ ಶಿಬಿರದಲ್ಲಿ ಮಾತನಾಡಿ, ಅತಿಯಾಗಿ ಕೊಬ್ಬಿನಂಶವುಳ್ಳ ಆಹಾರ ಸೇವಿಸುವುದು, ಧೂಮಪಾನ, ಮದ್ಯಪಾನ ಮಾಡುವುದು, ಕನಿಷ್ಠ ವ್ಯಾಯಮ ಮಾಡದಿರುವುದು, ಹೆಚ್ಚು ಸಮಯ ಒಂದೆ ಜಾಗದಲ್ಲಿ ಕುಳಿತುಕೊಳ್ಳುವುದು, ಮೈದಾಹಿಟ್ಟು ಬಳಕೆ, ಕಳಪೆ ಎಣ್ಣೆಯಿಂದ ತಯಾರಿಸಿದ ಆಹಾರ ಸೇವಿಸುವುದು ಅನಾರೋಗ್ಯಕ್ಕೆ ಕಾರಣ. ಒಮೆ ಕರಿದ ಎಣ್ಣೆಯನ್ನು ಪುನ: ಉಪಯೋಗಿಸಬಾರದು ಎಂದರು.

# ಇತಿಹಾಸದಲ್ಲಿ ಈ ದಿನ

## ಸೆಪ್ಟೆಂಬರ್ 14

1812: ನೆಪೋಲಿಯನ್ ಬೊನಪಾರ್ಟ್ ಸೇನೆ ರಷ್ಯಾದ ಮಾಸ್ಕೋವನ್ನು ಆಕ್ರಮಿಸಿತು.

1901: ಅಮೆರಿಕಾದ ಅಧ್ಯಕ್ಷ ವಿಲಿಯಂ ಮ್ಯಾಕಿನ್ಲಿ ಗುಂಡೇಟಿನಿಂದ ಗಂಭೀರವಾಗಿ ಗಾಯಗೊಂಡು ಮೃತಪಟ್ಟರು.

1959: ಸೋವಿಯತ್ ಯೂನಿಯನ್‌ನ ಲೂನಾ2 ಚಂದ್ರನ ಮೇಲ್ಮೈ ತಲುಪಿದ ಮೊದಲ ಮಾನವ ನಿರ್ಮಿತ ಉಪಗ್ರಹವಾಯಿತು.

1984: ಜೋ ಲೌರಿ ಮೊದಲ ಬಾರಿಗೆ ಬಲೂನ್ ಮೂಲಕ ಅಟ್ಲಾಂಟಿಕ್ ಸಮುದ್ರವನ್ನು ದಾಟಿದ ವ್ಯಕ್ತಿಯಾದರು.

1999: ಕಿರ್ಗಿಸ್ತಾನದಲ್ಲಿ ಭೂಕಂಪ ಸಂಭವಿಸಿ ನೂರಾರು ಜನರು ಬಲಿಯಾದರು.

### ಜನನ

1769: ಅಲೆಕ್ಸಾಂಡರ್ ವಾನ್ ಹಂಬೋಲ್ಟ್, ಜರ್ಮನ್ ಪ್ರಕೃತಿ ವಿಜ್ಞಾನಿ

1879: ಮಾರ್ಗರೇಟ್ ಸೇಂಗರ್, ಅಮೆರಿಕಾದ ಸಾಮಾಜಿಕ ಹೋರಾಟಗಾರ್ತಿ ಮತ್ತು ಜನನ ನಿಯಂತ್ರಣ ಚಳವಳಿ ಮುಖಂಡೆ

1933: ಪೆಕ್ಕಾ ತುಓಮಿಸ್ಟೊ, ಫಿನ್ಲ್ಯಾಂಡ್‌ನ ಹಾಸ್ಯನಟ


1957: ಸ್ಯಾಮ್ ನೀಲ್, ನ್ಯೂಜಿಲ್ಯಾಂಡ್‌ನ ಪ್ರಸಿದ್ಧ ಚಲನಚಿತ್ರ ನಟ

### ಮರಣ

1852: ಆರ್ಥರ್ ವೆಲ್ಲಸ್ಲಿ, ಇಂಗ್ಲೆಂಡಿನ ಪ್ರಸಿದ್ಧ ಸೇನಾಪತಿ

1901: ವಿಲಿಯಂ ಮ್ಯಾಕಿನ್ಲಿ, ಅಮೆರಿಕಾದ 25ನೇ ರಾಷ್ಟ್ರಪತಿ

1982: ಗ್ರೇಸ್ ಕೆಲ್ಲಿ, ಹಾಲಿವುಡ್ ನಟಿ ಹಾಗೂ ಮೊನಾಕೋ ರಾಜಮಾತೆ




# ಹಾಸನದಲ್ಲಿ ವಿಷ್ಣುವರ್ಧನ್ ಅಭಿಮಾನಿಗಳ ಸಂಭ್ರಮಾಚರಣೆ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕನ್ನಡ ಚಿತ್ರರಂಗದ ಮೇರು ನಟ ಡಾ. ವಿಷ್ಣುವರ್ಧನ್ ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿ ಘೋಷಣೆಯಾದ ಹಿನ್ನೆಲೆಯಲ್ಲಿ ಶುಕ್ರವಾರ ವಿಷ್ಣು ಸೇನಾ ಸಂಘಟನೆಯಿಂದ ಸಂಭ್ರಮಾಚರಿಸಲಾಯಿತು.

ಸಾಲಗಾಮೆ ರಸ್ತೆಯ ಸರಸ್ವತಿ ದೇವಾಲಯ ವೃತ್ತದ ಬಳಿಯ ವಿಷ್ಣುವರ್ಧನ್ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸಿ ಸಿಹಿ ಹಂಚಿ ಸಂತೋಷ ವ್ಯಕ್ತಪಡಿಸಿದರು.

ವಿಷ್ಣು ಸೇನಾ ಜಿಲ್ಲಾಧ್ಯಕ್ಷ ಮಹಂತೇಶ್ ಮಾತನಾಡಿ, ನಟ ವಿಷ್ಣುವರ್ಧನ್‌ಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡಿರುವುದು ಹಬ್ಬದ ಕ್ಷಣವಾಗಿದೆ.

200ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ ಸಾಹಸ ಸಿಂಹ ಪ್ರತಿಯೊಂದು ಚಿತ್ರವೂ ಸಮಾಜಕ್ಕೆ ಒಳ್ಳೆಯ ಸಂದೇಶ ನೀಡಿದೆ. ಸಮಾಧಿಗಾಗಿ ಬೆಂಗಳೂರಿನಲ್ಲಿ 10 ಗುಂಟೆ ಜಾಗ ನೀಡುವುದಾಗಿ ಸರ್ಕಾರ ಹೇಳಿರುವುದು ಆಶಾದಾಯಕ ಬೆಳವಣಿಗೆ ಎಂದರು.

ಕಲಾವಿದರ ಸಂಘದ ಅಧ್ಯಕ್ಷ ಕುಮಾರ್ ಮಾತನಾಡಿ, ವಿಷ್ಣುವರ್ಧನ್ ಎಂದರೆ ಸಂಸ್ಕಾರದ ವ್ಯಕ್ತಿತ್ವ.

ನಟನಾಗಿ ಸಮಾಜಕ್ಕೆ ಒಳ್ಳೆಯ ಸಂದೇಶ ರವಾನಿಸಿದ್ದಾರೆ. ಪರದೆ ಮೇಲೆ ಹೇಗೆ ಯಜಮಾನನಾಗಿ, ಕರುಣಾಮಯಿಯಾಗಿ, ಕರ್ಣನಾಗಿ ನಟಿಸಿದ್ದಾರೋ ನಿಜ ಜೀವನದಲ್ಲಿಯೂ ಅದೇ ರೀತಿಯ ಸಜ್ಜನಿಕೆಯ ಬದುಕು ನಡೆಸಿದ್ದಾರೆ ಎಂದರು.

ವಿಷ್ಣು ಸೇನೆಯ ಯಲಗುಂದ ಶಾಂತಕುಮಾರ್, ರಘುನಂದನ್, ತಮ್ಲಾಪುರ ಗಣೇಶ್, ಸುಧಾಕರ್, ವಿಜಯಕುಮಾರ್ ಮತ್ತಿತರರಿದ್ದರು.



ಹಾಸನ: ಅಕ್ರಮ ಗಾಂಜಾ ಮಾರಾಟ ಜಾಲವನ್ನು ಬೇಧಿಸಿರುವ ಶಾಂತಿಗ್ರಾಮ ಪೊಲೀಸರು ಮೂವರನ್ನು ಬಂಧಿಸಿ 25 ಕೆ.ಜಿ. ಗಾಂಜಾ ವಶಪಡಿಸಿಕೊಂಡಿದ್ದಾರೆ.

ಸೈಯದ್ ಪೈಸಲ್, ಸಿಕಂದರ್ ಪಾಷಾ ಹಾಗೂ ಹೀನಾ ಕೌಸರ್ ಬಂಧಿತರು. ಎಲ್ಲಿಂದಲೋ ಗಾಂಜಾ ಪದಾರ್ಥವನ್ನು ತಂದಿದ್ದ ಅವರು ಮಾರಾಟದ ಉದ್ದೇಶದಿಂದ ಬೆಂಗಳೂರಿಗೆ ತೆರಳುತ್ತಿದ್ದರು. ಸಾರಿಗೆ ಬಸ್ ಹಾಗು ಖಾಸಗಿ ವಾಹನಗಳಲ್ಲಿ ಸಂಚರಿಸಿದರೆ ಅನುಮಾನ ಬರುತ್ತದೆಂದು ರೈಲು ಸಂಚಾರ ಸುಲಭವೆಂದು ಯೋಜನೆ ರೂಪಿಸಿದ್ದರು.

ಶಾಂತಿಗ್ರಾಮ ವೃತ್ತ ನಿರೀಕ್ಷಕ ಕೆ.ಎನ್. ಚಂದ್ರಶೇಖರ್ ಅವರು ಖಚಿತ ಮಾಹಿತಿ ಮೇರೆಗೆ ಶುಕ್ರವಾರ ರೈಲು ನಿಲ್ದಾಣಕ್ಕೆ ಭೇಟಿ ನೀಡಿದಾಗ ಸಿಕ್ಕಿಬಿದ್ದಿದ್ದಾರೆ. ಮೂವರು ಆರೋಪಿಗಳ ಮೂಲ ಯಾವುದು ಹಾಗೂ ಗಾಂಜಾ ಎಲ್ಲಿಂದ ತಂದರು ಎಂಬ ಕುರಿತು ವಿಚಾರಣೆ ಮುಂದುವರಿದಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248